## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.89/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಮಂಜು | CW: 6 | PW: 4 |
| ತಂದೆಯ ಹೆಸರು | : | ಲಕ್ಷ್ಮಪ್ಪ | | |
| ವಯಸ್ಸು | : | 33 | | |
| ವೃತ್ತಿ | : | ಫೈನಾನ್ಸ್‌ನಲ್ಲಿ ಕೆಲಸ | | |
| ವಾಸಸ್ಥಳ | : | ಮುಸ್ಸೇನಾಳು | | |

ದಿನಾಂಕಃ 21.02.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ – ಮಾನ್ಯ ಸ.ಸ.ಅ.ರವರಿಂದಃ–

ಚಾಸಾ 1 ಮತ್ತು 5 ರವರು ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ನನ್ನ ಸಮಕ್ಷಮ ಪೋಲೀಸರು ಯಾವುದೇ ಪಂಚನಾಮೆ ಜರುಗಿಸಿಲ್ಲ. ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ಈ ಪ್ರಕರಣದ ಸಂಬಂಧ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಪೋಲೀಸರ ಕೋರಿಕೆಯ ಮೇರೆಗೆ ಕೆಲವು ದಾಖಲೆಗಳಿಗೆ ನಾನು ಸಹಿಯನ್ನು ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆದಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ.

ಸಾಕ್ಷಿಯು ನಿಪಿ 3, 4, 8 ಮತ್ತು 9 ಛಾಯಾಚಿತ್ರಗಳಲ್ಲಿ ತಾನು ಇರುವ ಬಗ್ಗೆ ನೋಡಿ ಗುರುತಿಸಿದ್ದು ಅದನ್ನು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯು ನಿಪಿ 2 ಸ್ದಳ ಪಂಚನಾಮೆ, ನಿಪಿ 6 ಕಚ್ಚಾ ನಕಾಶೆ, ನಿಪಿ 7 ವಾಹನ ಪಂಚನಾಮೆಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ), 6(ಬಿ) ಮತ್ತು 7(ಬಿ) ಎಂದು ಗುರುತಿಸಲಾಯಿತು.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.)

ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ–

ದಿಃ 21.06.2022 ರಂದು ಚಾಸಾ 1 ರವರು ಸ್ಥಳ ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 5 ರವರ ಸಮಕ್ಷಮ ಸಂಜೆ 4.30 ರಿಂದ 5.30 ರವರೆಗೆ ನಿಪಿ 2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ 3 ಮತ್ತು 4 ರಂತೆ ಫೋಟೋ ತೆಗೆದು, ನಿಪಿ 6 ರಂತೆ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ನ್ಯಾಮತಿ ಪೊಲೀಸ್ ಠಾಣೆಯ ವಸತಿ ಗೃಹದ ಆವರಣದಲ್ಲಿ ನನ್ನ ಹಾಗೂ ಚಾಸಾ 1 ಮತ್ತು 5 ರ ಸಮಕ್ಷಮ ಸಂಜೆ 5.40 ರಿಂದ 6.20 ರವರೆಗೆ ನಿಪಿ 7 ರಂತೆ ವಾಹನ ಅಮಾನತ್ತು ಪಂಚನಾಮೆ ಜರುಗಿಸಿ , ಆ ಸಮಯದಲ್ಲಿ ಕೆಎ 20 ಎಎ 6856 ಬಸ್ ನ್ನು ನಮ್ಮಗಳ ಸಮಕ್ಷಮ ವಶಪಡಿಸಿಕೊಂಡು ನಿಪಿ 8 ಮತ್ತು 9 ರಂತೆ ಪೋಟೋ ತೆಗೆದರು ಎಂದರೆ ಸರಿಯಲ್ಲ.

ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ– ಆರೋಪಿ ಪರ ವಕೀಲರಿಂದಃ–

ಆರೋಪಿ ಪರ ವಕೀಲರು ಪಾಟೀ ಸವಾಲು ಏನು ಇಲ್ಲ ಎಂದು ತಿಳಿಸಿದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.